ಅವರು ಅನುಕೂಲ ಮಾಡಿಕೊಳ್ಳಬಹುದು. ಈ ಒಂದು ಯೋಜನೆಯಿಂದ ೩೦ ಲಕ್ಷ ಜನರಿಗೆ ಅನುಕೂಲ ವಾಗುವಾಗ ಈ ಸಣ್ಣಪುಟ್ಟ ನ್ಯೂನತೆಗಳನ್ನು ನಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸುತ್ತೇವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗ ಒಂದು ವಾರದಿಂದ ಶಿವಮೊಗ್ಗದ ಜಿಲ್ಲಾಧಿಕಾರಿ ಗಳನ್ನು ಸಂಪರ್ಕ ಮಾಡಿದ್ದೇನೆ. ಅಲ್ಲಿ ಎರಡನೆಯ ಸಾರಿ ಕಾರ್ಡುಗಳನ್ನು ಕೊಟ್ಟಿದ್ದಾರೆ. ಅವರಿಗೆ ಅಲಾಟ್‌ಮೆಂಟ್ ಆಗದೇ ಫಲಾನುಭವಿಗಳಿಗೆ ಪದಾರ್ಥಗಳು ಸಿಕ್ಕಿಲ್ಲ. ಈ ರೀತಿ ಪರಿಸ್ಥಿತಿ ಇಡೀ ರಾಜ್ಯದಲ್ಲಿ ಇರಬಹುದು. ಆದ್ದರಿಂದ ತಾವು ಅಲಾಟ್‌ಮಾಡುವಂಥ ವ್ಯವಸ್ಥೆಯನ್ನೇ ಸರಿಯಾಗಿ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಮಾಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೆ, ನಾನು ಒಂದು ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು.—ಈಗಾಗಲೇ ಕೊಶ್ಚನ್ ಅವರ್ ಮುಗಿದು ಮುಂದಕ್ಕೆ ಹೋಗಿದೆ, ತಾವು ಪ್ರಶ್ನೆ ಕೇಳಲು ಆಗುವುದಿಲ್ಲ.

ಅಧ್ಯಕ್ಷರು.—ತಾವು ೩ ಜನರೂ ಕೂಡಬೇಕು. ಕೊಶ್ಚನ್ ಅವರ್ ಮುಗಿದುಹೋಯಿತು ಎಂದು ಉಳಿದಿರುವ ಪ್ರಶ್ನೆಗಳನ್ನು ಲ್ಯಾಪ್ಸ್‌ಮಾಡಿ ಮುಂದಕ್ಕೆ ಹೋಗಬೇಕಾಗಿತ್ತು. ಆದರೆ ಲ್ಯಾಪ್ಸ್ ಮಾಡುವುದಿಲ್ಲ. ಇನ್ನೂ ೭ ಪ್ರಶ್ನೆಗಳಿವೆ, ಅವಕಾಶ ಕೊಡುತ್ತೇನೆ. ಈಗ ಮುಂದಿನ ಪ್ರಶ್ನೆ ಕೇಳಿ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ನಾನು ಒಂದೇ ಒಂದು ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು.—ತಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಸಚಿವರು ರಾಜಕೀಯವಾಗಿ ಪ್ರಶ್ನೆ ಹಾಕಿದ್ದಾರೆಂದು ಹೇಳಿದರು. ನನ್ನ ಉದ್ದೇಶ ಏನೆಂದರೆ, ಸರ್ಕಾರದ ಕಾರ್ಯಕ್ರಮ ಏನು, ಅದರ ಪ್ರಕಾರ ನ್ಯಾಯವಾಗಿ ಬಡ ಜನರಿಗೆ ಈ ಫಲ ಸಿಕ್ಕಿಲ್ಲ ಎಂದು ಈ ಸದನದ ಸದಸ್ಯನಾಗಿ ಪ್ರಶ್ನೆ ಕೇಳಿದ್ದೇನೆಯೇ ವಿನಹ ಯಾವ ರಾಜಕೀಯ ಉದ್ದೇಶವನ್ನೂ ಇದರಲ್ಲಿ ಇಟ್ಟುಕೊಂಡಿಲ್ಲ. ಕಾರ್ಡುಗಳನ್ನು ವಾಪಸ್ ಪಡೆದು ಕೊಂಡಿಲ್ಲ ಎಂದು ಹೇಳಿದ್ದಾರೆ. ಒಂದು ಸಾವಿರ ಕಾರ್ಡುಗಳನ್ನು ವಾಪಸ್ ಪಡೆದಿದ್ದಾರೆ, ತನಿಖೆ ಮಾಡಿಸಲಿ.

ಶ್ರೀ ಎ. ಲಕ್ಷ್ಮೀಸಾಗರ್.—ತನಿಖೆ ಮಾಡಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಪಾಟೀಲರೇ, ನಿಮ್ಮ ಪ್ರಶ್ನೆ (೧೧೨) ಮುಂದಕ್ಕೆ ಹೋಗಿದೆ.

ಅಫಜಲಪುರ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು

೩೫(೧೩೬) ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲಪುರ).—ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ಅಫಜಲಪುರ ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ ಹಾಗೂ ಎಷ್ಟು ಪ್ರಾಥಮಿಕ ಆರೋಗ್ಯ ಘಟಕಗಳಿವೆ?

(ಆ) ಅಫಜಲಪುರ ತಾಲ್ಲೂಕಿನ ಯಾವ ಯಾವ ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ ಇದೆ ?

(ಇ) ಈ ಕೊರತೆಯನ್ನು ತುಂಬಲು ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ?

(ಈ) ಸ್ವಂತ ಕಟ್ಟಡವಿಲ್ಲದೆ ಸರ್ಕಾರದಿಂದ ಮಂಜೂರು ಆಗಿರುವ ಪ್ರಾಥಮಿಕ ಆರೋಗ್ಯ ಘಟಕಗಳು ಕೆಲಸ ನಿರ್ವಹಿಸುತ್ತಿಲ್ಲವೆ?

(ಉ) ಹಾಗಿದ್ದಲ್ಲಿ ಆ ರೀತಿಯ ಎಷ್ಟು ಆರೋಗ್ಯ ಘಟಕಗಳಿವೆ?

(ಊ) ಹಾಗೂ ಈ ಕಟ್ಟಡವನ್ನು ಈ ವರ್ಷವೇ ಪೂರ್ತಿ ಮಾಡುವರೇ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

(ಅ) ೪ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ೪ ಪ್ರಾಥಮಿಕ ಆರೋಗ್ಯ ಘಟಕಗಳು ಇವೆ.

(ಆ) ಆಫಜಲಪುರ ತಾಲ್ಲೂಕಿನ ಯಾವ ಆಸ್ಪತ್ರೆಯಲ್ಲೂ ಸಿಬ್ಬಂದಿ ಕೊರತೆ ಇಲ್ಲ.

(ಇ) ಉದ್ಭವಿಸುವುದಿಲ್ಲ.

(ಈ) ನಿರ್ಮಿಸುತ್ತಿವೆ.

(ಉ) ಎರಡು.

(ಊ) ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇದನ್ನು ಪರಿಶೀಲಿಸಲಾಗುವುದು.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇದನ್ನು ಪರಿಶೀಲಿಸಲಾಗುವುದು ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಈಗಾಗಲೇ ಅಲ್ಲಿ ಪಂಚಾಯಿತಿವತಿಯಿಂದ ೪ ಎಕರೆ ಭೂಮಿ, ೨೫ ಸಾವಿರ ರೂಪಾಯಿಗಳ ಹಣ ಕಟ್ಟಿ ೧೧ ವರ್ಷ ವಾಯಿತು. ಅದನ್ನು ಬ್ಯಾಂಕಿನಲ್ಲಿಟ್ಟಿದ್ದರೆ ಅಷ್ಟು ಹೆಚ್ಚು ಹಣ ಬರುತ್ತಿತ್ತು? ಈ ಪ್ರಶ್ನೆಯನ್ನು ಎರಡನೆಯ ಸಾರಿ ಹಾಕಿದಾಗ ಮಾಜಿ ಸಚಿವರಾದ ತಿಮ್ಮೇಗೌಡರು ಆಶ್ವಾಸನೆ ಕೊಟ್ಟಿದ್ದಾರೆ. ಆಫ್ಜಲ್ಪುರ ತಾಲ್ಲೂಕಿಗೆ ಅವರು ಬಂದಾಗ ಪರಿಸ್ಥಿತಿಯನ್ನು ಹೇಳಿದ್ದೇವೆ. ಅವರು ಆಶ್ವಾಸನೆ ಕೊಟ್ಟಿದ್ದಾರೆ. ಈ ವರ್ಷದ ಅವಧಿಯಲ್ಲಿ ಅದನ್ನು ಪೂರ್ಣಗೊಳಿಸಲಿಕ್ಕೆ ಆಗುತ್ತದೆಯೆ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಈ ವರ್ಷವೇ ಆ ಕಟ್ಟಡವನ್ನು ಮುಗಿಸುತ್ತೀರಾ ಎಂದು ಕೇಳಿದ್ದಾರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಪರಿಶೀಲನೆ ಮಾಡುತ್ತೇನೆ ಎಂದು ಉತ್ತರ ಕೊಟ್ಟಿದ್ದೇನೆ. ಹಿಂದೆ ಈ ಕಟ್ಟಡದ ಬಗ್ಗೆ ಏನು ಭರವಸೆ ಸಿಕ್ಕಿತೋ ಆ ಭರವಸೆ ಈಗಲೂ ಜೀವಂತ ವಾಗಿದೆ. ಇದರ ಬಗ್ಗೆ ಮಾನ್ಯ ಸದಸ್ಯರು ಸಂದೇಹ ಪಡಬೇಕಾಗಿಲ್ಲ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಎಷ್ಟು ಸಮಯ ಕಾಯಬೇಕಾಗುತ್ತದೆ. ೨೫ ಸಾವಿರ ಹಣ ಏನು ಕಟ್ಟಿದ್ದೇವೆ ಅದಕ್ಕೆ ಬಡ್ಡಿ ಕೊಟ್ಟುಬಿಡಿ, ನಾವೇ ಹೆಚ್ಚು ಹಣ ಹಾಕಿ ಕಟ್ಟಿಸಿಕೊಳ್ಳುತ್ತೇವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಹೆಚ್ಚು ಸಮಯ ಆಗುವುದಿಲ್ಲ ಆದಷ್ಟು ಬೇಗ ಕಟ್ಟಿಸಿ ಕೊಡುತ್ತೇವೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—೪ ಎಕರೆ ಭೂಮಿ, ೨೫ ಸಾವಿರ ರೂಪಾಯಿಗಳು ಕಟ್ಟಿದ್ದೇವೆ. ಅದಕ್ಕೆ ಇಂಟರೆಸ್ಟ್ ಕೊಟ್ಟುಬಿಡಿ, ನಾವೇ ಹಾಕಿ ಕಟ್ಟಿಸುತ್ತೇವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—೨೫ ಸಾವಿರ ರೂಪಾಯಿಗಳನ್ನು ಕಟ್ಟಿ ೧೧ ವರ್ಷವಾಗಿದೆ ಎನ್ನುವ ವಿಚಾರ ಹೇಳುತ್ತಿದ್ದೀರಿ, ಇದರಲ್ಲಿ ನಮ್ಮ ಸರ್ಕಾರಕ್ಕೆ ಸಂಬಂಧಪಟ್ಟಹಾಗೆ ೨-೩ ವರ್ಷದ ಉತ್ತರ ಕೊಡಬಹುದು, ನಾನು ಹತ್ತು ವರ್ಷದ್ದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಹಳ್ಳಿಗಳಲ್ಲಿ ಕಟ್ಟಿತಕ್ಕಂಥ ಆರೋಗ್ಯ ಕೇಂದ್ರಗಳ ಬಗ್ಗೆ ಕೇಂದ್ರ ಸರ್ಕಾರದವರು ಒನ್ ಥರ್ಡ್ ಸ್ಕೀಂ ಎಂದು ಮಾಡಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಿಂದೆ ತಾವು ಕಾಂಗ್ರೆಸ್‌ನಲ್ಲಿದ್ದಿರಿ, ಆಗ ನಿಮ್ಮ ಜವಾಬ್ದಾರಿಯೂ ಇತ್ತು.

ಅಧ್ಯಕ್ಷರು.—ನಡುವೆ ಏನು ಮಾತನಾಡುವುದು.

ಡಾ|| ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಸ್ನೇಹಿತರು ಕೇಳಿರತಕ್ಕ ಪ್ರಶ್ನೆ ಏನಿದೆ ಅದಕ್ಕೆ ಸಂಬಂಧಪಟ್ಟಹಾಗೆ ಹಿಂದಿನ ಸರ್ಕಾರದಲ್ಲಿ ನಿಯಮವಿತ್ತು. ಬಿಲ್ಡಿಂಗನ್ನು ಸ್ಥಳೀಯ ಜನಗಳೇ ಕಟ್ಟಿಸ ಬೇಕು ಎಂದು. ಆ ನಿಯಮ ಇದ್ದಾಗ ಆಸ್ಪತ್ರೆ ಸ್ಯಾಂಕ್ಷನ್ ಆಯಿತು. ನಂತರ ಹೊಸ ನಿಯಮ

ಬಂದು ೨೫ ಸಾವಿರ ರೂಪಾಯಿಗಳನ್ನು ಮತ್ತು ಜಮೀನು ಕೊಡಬೇಕು ಕೊಟ್ಟರೆ ಗವರ್ನಮೆಂಟ್ ನವರು ಕಟ್ಟಿಸಬೇಕು ಎಂದು ಆಯಿತು. ಹಿಂದೆ ಯಾವ ಯಾವ ಆಸ್ಪತ್ರೆಗಳನ್ನು ಕಟ್ಟಿದ್ದೇವೆ, ಆ ನಿಯಮವನ್ನೇ ಅನುಸರಿಸಬೇಕು ಎಂದು ಕೇಳಿದ್ದಾರೆ. ಬಹುಶಃ ಅದು ಇಲಾಖೆಯ ಪರಿಶೀಲನೆಯಲ್ಲಿರಬಹುದು. ಆರೋಗ್ಯ ಇಲಾಖೆ ಮಂಜೂರು ಮಾಡಿಕೊಟ್ಟರೆ ಕಟ್ಟಿಸಬೇಕಾಗುತ್ತದೆ. ಹಿಂದೆ ನಿಯಮ ಇದ್ದಾಗ ಈ ಆಸ್ಪತ್ರೆ ಸ್ಯಾಂಕ್ಷನ್ ಆಗಿರುವುದು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನಿಯಮವನ್ನು ಸಡಿಲಿಸಿ ಸಹಾಯ ಮಾಡಬೇಕು ಎಂದು ಹೇಳಿದ್ದಾರೆ. ಅದನ್ನು ಮಾಡುವುದಕ್ಕೆ ಸಾಧ್ಯವಿದೆಯೋ ಇಲ್ಲವೋ ಎನ್ನುವುದು ಪರಿಶೀಲನೆಯಲ್ಲಿದೆ.

ಶ್ರೀ ಕೆ. ಹೆಚ್. ಪಾಟೀಲ್.—½ ಕ್ಯೂರಿಂ ಎಂದು ಕೇಂದ್ರ ಸರ್ಕಾರದ್ದು ಇದೆ. ಅದರ ಪ್ರಯೋಜನ ನಮ್ಮ ರಾಜ್ಯದಲ್ಲಿ ಆಗಿಲ್ಲ. ಈಗಲಾದರೂ ತಾವು ಪ್ರಯತ್ನಮಾಡಿ ಆ ಕ್ಯೂರಿಮನ್ನು ಆಳವಡಿಸಿಕೊಂಡು ಕೇಂದ್ರದಿಂದ ಬರತಕ್ಕಂಥ ಹಣವನ್ನು ಪಡೆದುಕೊಂಡು ಜನರಿಗೆ ಉಪಯೋಗ ಮಾಡುತ್ತೀರಾ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇದು ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಗೆ ಸಂಬಂಧಪಡುವುದಿಲ್ಲ. ಆದರೂ ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ವ್ಯವಹರಿಸುತ್ತೇನೆ.

ಶ್ರೀ ಪಿ. ಬೈರೇಗೌಡ.—ಪಿ.ಹೆಚ್.ಪಿ. ಮತ್ತು ಮೆಟರ್ನಿಟಿ ಅನೆಕ್ಸರ್ ಮಂಜೂರಾತಿಗೋಸ್ಕರ, ಪಿ.ಹೆಚ್.ಸಿಗೆ ೨೫ ಸಾವಿರ, ಮೆಟರ್ನಿಟಿ ಅನೆಕ್ಸರ್‌ಗೆ ೫೧ ಸಾವಿರ ಹಣ ಕಟ್ಟಬೇಕು. ಆದರೆ ಕಾಲಕ್ಕೆ ಸರಿಯಾಗಿ ಕಟ್ಟದೇ ಇರುವ ಕಾರಣದಿಂದ ಈಗ ಪುನಃ ಬೆಲೆ ಜಾಸ್ತಿಯಾಗಿದೆ. ಆ ಕಾರಣದಿಂದ ಹೆಚ್ಚಾಗಿರತಕ್ಕಂಥ ಹಣವನ್ನು ಸಂಬಂಧಪಟ್ಟ ಗ್ರಾಮಪಂಚಾಯ್ತಿಯವರು, ಸಾರ್ವಜನಿಕರು ಕಟ್ಟಬೇಕು ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿರಬಹುದೆ? ಈ ಒಂದು ಪರಿಸ್ಥಿತಿಯಿಂದ ಅನೇಕ ಕಡೆ ಕಟ್ಟಡಗಳು ನಿಲ್ಲುವಂತಹ ಪರಿಸ್ಥಿತಿ ಬಂದಿದೆ. ಆದುದರಿಂದ ಈ ಸಮಸ್ಯೆಯನ್ನು ಬಗೆಹರಿಸತಕ್ಕಂಥ ಪ್ರಯತ್ನ ಮಾಡುತ್ತೀರಾ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮೂಲ ಪ್ರಶ್ನೆಯಿಂದ ಮಾನ್ಯ ಬೈರೆ ಗೌಡರು ಕೇಳಿರತಕ್ಕ ಉಪ ಪ್ರಶ್ನೆ ಉದ್ಭವಿಸುವುದಿಲ್ಲ. ಇದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ನೇಮಕಾತಿ ಸಮಿತಿಗಳ ಬಗ್ಗೆ

೩೬ (೬.೨೯) (ಬಿ) ಶ್ರೀ ಎಸ್.ಎಸ್. ಕಡಪಟ್ಟಿ (ಹುನಗುಂದ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ನೇಮಕವಾದ ರಾಜ್ಯಮಟ್ಟದ ನೇಮಕಾತಿ ಸಮಿತಿಗಳ ಸಂಖ್ಯೆ ಎಷ್ಟು ?

ಆ) ಅಧಿಕಾರೇತರ ಸದಸ್ಯರ ಹೆಸರು, ಅವರ ಸ್ಥಳ ಹಾಗೂ ಜಿಲ್ಲೆಯ ಬಗ್ಗೆ ಮಾಹಿತಿಯನ್ನು ಒದಗಿಸುವುದು ?

ಇ) ವಿಲೀನಗೊಳಿಸಿದ ಪ್ರದೇಶಗಳು ಹಾಗೂ ಹಳೆ ಮೈಸೂರಿನ ಇತರ ಪ್ರದೇಶಗಳಲ್ಲಿರುವವರಿಗೆ ನೇಮಕಾತಿ ಸಮಿತಿಯ ಸದಸ್ಯರಾಗಿ ನೇಮಿಸುವಾಗ ತಾರತಮ್ಯ ಮಾಡಲಾಗಿದೆಯೇ ?

ಈ) ಇಂತಹ ರಾಜ್ಯಮಟ್ಟದ ಸಮಿತಿಗಳು ೧೯೮೫– ೪, ೧೯೮೪–೮೫ ಮತ್ತು ೧೯೮೫–೮೬ರಲ್ಲಿ ಮಾಡಿರುವ ನೇಮಕಾತಿಗಳೆಷ್ಟು? ಜಿಲ್ಲಾವಾರು ವಿವರಗಳನ್ನು ನಿಡುವುದು;

ಉ) ಆಗಿದ್ದಲ್ಲಿ ನೇಮಕಾತಿ ಸಮಿತಿಯಲ್ಲಿ ಪ್ರಾದೇಶಿಕ ಅಸಮಾನತೆಯ ಸಮಸ್ಯೆಯನ್ನು ಹೋಗಲಾಡಿಸಲು ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ೫೪.

ಆ) ಅಧಿಕಾರೇತರ ಸದಸ್ಯರ ಹೆಸರು ಹಾಗೂ ಅವರ ಜಿಲ್ಲೆಯ ಬಗ್ಗೆ ವಿವರಣೆಗಳನ್ನೊಳಗೊಂಡ ಪಟ್ಟಿಯನ್ನು ಲಗತ್ತಿಸಿದೆ.